ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಚಿಂಚೋಳಿ ಮತ ಕ್ಷೇತ್ರದ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ, ಗುಂಡಿ ಮುಚ್ಚುವುದು, ಬರ್‌ಮ್ ಕಟ್ಟಿಂಗ್ ಅವಶ್ಯವಿದ್ದಲ್ಲಿ ದುರಸ್ತಿ ಮಾಡಲಾಗಿದೆ. ರಾಜ್ಯ ಹೆದ್ದಾರಿಯ ನಿರ್ವಹಣೆ ಕಾರ್ಯದ ಪ್ರಗತಿಯು ನಿಧಾನವಾಗಿತ್ತು. ಈಗ ಪ್ರಗತಿಯಲ್ಲಿದೆ.

ಆ. ನಿಧಾನವಾಗಿದ್ದ ಪ್ರಗತಿಗೆ ರಾಜ್ಯ ಹೆದ್ದಾರಿ ನಿರ್ವಹಣೆಯ ಗುತ್ತಿಗೆದಾರರಿಗೆ ದಂಡವಿಧಿಸಲಾಗಿದೆ. ಈಗ ಕಾಮಗಾರಿ ಪ್ರಗತಿಯಲ್ಲಿದೆ.

ಚಿಂಚೋಳಿಯಲ್ಲಿ ಸರ್ಕಾರಿ ಐ.ಟಿ.ಐ. ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿ

882 (1557) - ಶ್ರೀ ಕೈಲಾಸನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಕಾರ್ಮಿಕಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಿಂಚೋಳಿಯಲ್ಲಿ ಸರಕಾರಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಒಟ್ಟು ಮಂಜೂರಾದ ಶಿಕ್ಷಕರ ಹಾಗೂ ಶಿಕ್ಷಕೇತರ ಸಿಬ್ಬಂದಿಗಳೆಷ್ಟು;

ಆ. ಅವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು, ಖಾಲಿ ಇದ್ದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲು ಮಾಡಿರುವ ಪರ್ಯಾಯ ವ್ಯವಸ್ಥೆ ಏನು?

ಶ್ರೀ ಖಮರುಲ್ಲ ಇಸ್ಲಾಂ (ಕಾರ್ಮಿಕ ಸಚಿವರು) :

ಅ. ಒಟ್ಟು ಮಂಜೂರಾದ ಹುದ್ದೆಗಳು - 21
ಶಿಕ್ಷಕರ ಹುದ್ದೆಗಳು - 8
ಶಿಕ್ಷಕೇತರ ಹುದ್ದೆಗಳು - 13

ಆ. ಖಾಲಿ ಇರುವ ಹುದ್ದೆಗಳು - 18

ಹತ್ತಿರದ ಸಂಸ್ಥೆಗಳಿಂದ ಹಿರಿಯ ತರಬೇತಿ ಅಧಿಕಾರಿಗಳ ನಿಯೋಜನೆ ಮತ್ತು ಅತಿಥಿ ಬೋಧಕರನ್ನು ಆಹ್ವಾನಿಸುವ ಮೂಲಕ ವಿದ್ಯಾರ್ಥಿಗಳಿಗೆ ಬೋಧಿಸುವ ವ್ಯವಸ್ಥೆ ಮಾಡಲಾಗಿದೆ.

ಮೈಸೂರು ಬೆಂಗಳೂರು ಎಕ್ಸಪ್ರೆಸ್ ಕಾರಿಡಾರ್ ಯೋಜನೆ

883 (401) - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮೈಸೂರು-ಬೆಂಗಳೂರು ನಡುವಿನ ವೇಗದ ಹೆದ್ದಾರಿ ಕಾರಿಡಾರ್ ಯೋಜನೆಯಡಿಯಲ್ಲಿ ರಸ್ತೆ ನಿರ್ಮಾಣಕ್ಕೆ ಮಾತ್ರ ಕೇಂದ್ರ ಸರ್ಕಾರ ಅನುಮತಿ ನೀಡಿರುವುದು ನಿಜವಲ್ಲವೇ;

ಆ. ಈ ಯೋಜನೆಯಡಿಯಲ್ಲಿ ಮಸಾಹತು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರದ ಪರಿಸರ ಇಲಾಖೆ ಅನುಮತಿ ನೀಡಿದೆಯೆ;

ಇ. ನೀಡದಿದ್ದಲ್ಲಿ ಕೇಂದ್ರ ಸರ್ಕಾರದ ಅನುಮತಿ ಇಲ್ಲದೆಯೇ ಮಸಾಹತು ಅಭಿವೃದ್ಧಿಪಡಿಸುವ ಕಾರ್ಯ ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ. ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು;

ಉ. ಈ ಕಾರಿಡಾರ್ ಯೋಜನೆಯ ಕಾರ್ಯ ಪ್ರಗತಿಯ ವಿವರ ನೀಡುವುದು;

ಊ. ಈ ಯೋಜನೆ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಮೈಸೂರು-ಬೆಂಗಳೂರು ನಡುವಿನ ವೇಗದ ಹೆದ್ದಾರಿ ಕಾರಿಡಾರ್ ಯೋಜನೆಯ ರಸ್ತೆ ನಿರ್ಮಾಣಕ್ಕೆ ನಿಯಮಾನುಸಾರ ಅಗತ್ಯವಾದ ಅನುಮತಿಯನ್ನು ಕೇಂದ್ರ ಸರ್ಕಾರದ ಪರಿಸರ ಇಲಾಖೆಯ ವತಿಯಿಂದ ಪಡೆಯಲಾಗಿದೆ.